

## ಆ್ಯಡ್‌ಬ್ಲಾಕ್ ಪ್ಲಸ್

ವೆಬ್ ಪುಟದ ಮೇಲೆ ಕುಟ್ಟಿದಾಗ ಕೆಲವೊಮ್ಮೆ ಅದಕ್ಕೆ ಲಗತ್ತಾಗಿರುವ ಜಾಹೀರಾತನ್ನು ಎಳೆದುಕೊಂಡು ಕಿರಿಕಿರಿಯಾಗುತ್ತದೆ. ನಿಮ್ಮ ಸಮಯವೂ ವ್ಯರ್ಥ. ಐಫೋನ್‌ನ ಈ ಆ್ಯಪ್ ಮೊಬೈಲ್ ವೆಬ್‌ಸೈಟ್ ಅನ್ನು ಜಾಹೀರಾತುಗಳಿಲ್ಲದೇ ನೋಡುವ ಸೌಲಭ್ಯ ನೀಡುತ್ತದೆ. ಇದರಿಂದಾಗಿ ವೆಬ್‌ಸೈಟ್ ಲೋಡ್ ಆಗಲು ಕಡಿಮೆ ಸಮಯ ತಗಲುತ್ತದೆ. ಆ ಮೂಲಕ ಲೋಡ್ ಆಗುವಾಗ ಬಳಕೆಯಾಗುವ ಡೇಟಾ ಶುಲ್ಕ ಕೂಡಾ ಕಡಿಮೆಯಾಗುತ್ತದೆ. ಇದು ಉಚಿತ ಆ್ಯಪ್ ಆಗಿದ್ದು ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದೇ ಹೆಸರಿನ ಹಾಗೂ ಐಕಾನಿನ ಹಲವು ಆ್ಯಪ್‌ಗಳಿದ್ದು ಏಯೋ ಅಭಿವೃದ್ಧಿಪಡಿಸಿದ ಆ್ಯಪ್ ಉತ್ತಮ. ಅಳವಡಿಕೆಯ ನಂತರ ಸೆಟಪ್ ಮಾಡಿಕೊಳ್ಳಿ.

## 360 ಡಿಗ್ರಿ ಲೈಫ್‌ಸ್ಟೈಲ್ ಚ್ಯಾಟ್‌ಆ್ಯಪ್ 'ಎನ್-ಗೇಜ್'

ಇತ್ತೀಚೆಗೆ ಮುಂಬೈನಲ್ಲಿ ಬಿಡುಗಡೆಯಾಗಿರುವ ಈ ಆ್ಯಪ್ ಮೂಲಕ ಇತರ ಯಾವುದೇ ಮೆಸೆಂಜರ್ ಆ್ಯಪ್ ಬಳಕೆದಾರರ ಜೊತೆ ವಿಡಿಯೋ ಹಾಗೂ ಆಡಿಯೋ ಕರೆಗಳನ್ನು ಮಾಡಬಹುದು. ಇದು ಅತ್ಯಂತ ಸುಧಾರಿತ ಆ್ಯಪ್ ಎಂದು ಬಣ್ಣಿಸಲಾಗಿದ್ದು, ಬಳಕೆದಾರರಿಗೆ ಅನವಶ್ಯಕ ತಡೆಗಳಿಂದ ಮುಕ್ತಿ ನೀಡುತ್ತದೆ. ಸ್ಮಾರ್ಟ್‌ಫೋನ್ ಇಲ್ಲದ ಸ್ನೇಹಿತರು ಮತ್ತು ಬಂಧುಗಳ ಜೊತೆ ಸಂವಾದ ನಡೆಸಬಹುದು. ವಿಡಿಯೋ ಕರೆಗಳನ್ನು ಸ್ಮಾರ್ಟ್‌ಫೋನ್, ಕಂಪ್ಯೂಟರ್ ಅಥವಾ ಟ್ಯಾಬ್ಲೆಟ್ ಮೂಲಕ ಪಡೆಯಬಹುದು. ಇದರಲ್ಲಿ ಭಾಷಾಂತರ ಸವಲತ್ತೂ ಇದೆ. ಈ ಆ್ಯಪ್ ಇಲ್ಲದವರ ಜೊತೆಯೂ ಸಂವಹನ ನಡೆಸಲು ಸಾಧ್ಯ. ಅದೂ ಏಕಕಾಲಕ್ಕೆ 10 ಮಂದಿಯ ಜೊತೆ.







## ಗೂಗ್ಲ್ ಡ್ರೈವ್

ಆ್ಯಂಡ್ರಾಯ್ಡ್‌ನ ಈ ಆ್ಯಪ್ ನಿಮ್ಮ ಎಲ್ಲಾ ಫೈಲುಗಳನ್ನು ಸುಲಭವಾಗಿ ಸಿಗುವಂತೆ ಮಾಡುವುದಲ್ಲದೇ, ನೀವು ಎಲ್ಲೇ ಇದ್ದರೂ ತೊಂದರೆಯಿಲ್ಲದೇ ಅವು ಲಭ್ಯವಾಗುತ್ತವೆ. ಸಂಗ್ರಹ ಸಾಮರ್ಥ್ಯ ಹೆಚ್ಚಿದ್ದು, ಮೇಲ್ದರ್ಜೆಗೆ ಏರಿಸುವಾಗ ಹೆಚ್ಚು ಶುಲ್ಕ ಬೀಳುವುದಿಲ್ಲ. ಹುಡುಕಾಟ ಹಾಗೂ ಶೇರ್ ಮಾಡಿಕೊಳ್ಳಲು ಅತ್ಯಂತ ಪ್ರಬಲವಾದ ಟೂಲ್‌ಗಳಿವೆ. ಗೂಗ್ಲ್ ಡಾಕ್ಸ್, ಶೀಟ್ಸ್, ಸ್ಲೈಡ್ಸ್ ಹಾಗೂ ಫೋಟೊ ಆ್ಯಪ್‌ಗಳ ಜೊತೆ ಸಂಯೋಜನೆಗೊಳ್ಳುತ್ತದೆ. ಇತರ ಆ್ಯಪ್‌ಗಳಲ್ಲಿ ಕ್ಲೌಡ್ ಆಧಾರದ ಫೈಲ್ ಕ್ರೋಢೀಕರಣ ಹಾಗೂ ಸಂಗ್ರಹ ಸೌಲಭ್ಯವಿದ್ದು, ಈ ರೀತಿ ಸಂಯೋಜನೆಗೊಳ್ಳಲು ಸಾಧ್ಯವಿಲ್ಲ. ಇದು ಉಚಿತವಾಗಿದ್ದು ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆದರೆ ಇದರ ಉಚಿತ ಮಿತಿ 15 ಜಿಬಿವರೆಗೆ ಮಾತ್ರ. ನಂತರ ಶುಲ್ಕ ಪಾವತಿಸಬೇಕು.

## ಸರ್ಕಲ್ ಆಫ್ 6

ನೀವು ಅಪಾಯದಲ್ಲಿದ್ದಾಗ ತಕ್ಷಣ ನೆರವಿಗಾಗಿ ಸಂಪರ್ಕಿಸಲು ಈ ಆ್ಯಪ್ ಸಹಕಾರಿ. ಎರಡು ಬಾರಿ ತಟ್ಟಿದರೆ ಮೊದಲೇ ಬರೆಯಲ್ಪಟ್ಟ ಸಂದೇಶವನ್ನು ನಿಮ್ಮ ಯಾವುದಾದರೂ 6 ಸಂಪರ್ಕ ಸಂಖ್ಯೆಗಳಿಗೆ ಕಳಿಸುತ್ತದೆ. ಒಂದು ಸಂದೇಶ ನೀವು ಇರುವ ಜಿಪಿಎಸ್ ಸ್ಥಳದ ಮಾಹಿತಿ ನೀಡುತ್ತದೆ. ಇನ್ನೊಂದು ಸಂದೇಶವು ನಿಮ್ಮ ಸಂಪರ್ಕದಲ್ಲಿರುವಂತೆ ಕೋರುತ್ತದೆ.




■ ಎಸ್. ತುಂಬೆ